ಪರಿಣಾಮ 2020ರ ಸಾಲಿನಲ್ಲಿ 84 ಲಕ್ಷ   ಗಣ ರಾಜ್ಯೋತ್ಸವ ಆಚರಿಸಲಾಯಿತ

# ಎಂಎಸ್‌ಎಂಇ ಡಿಜಿಟಲ್ ಪ್ಲಾಟ್‌ಫಾರಂಗೆ ಚಾಲನೆ

ಬೆಂಗಳೂರು:ಸೆಬಿ ನೋಂದಾಯಿತ ಕ್ರೆಡಿಟ್ ರೇಟಿಂಗ್ ಏಜೆನ್ಸಿಯಾಗಿರುವ ಬ್ರಿಕ್‌ವರ್ಕ್ ರೇಟಿಂಗ್ಸ್‌ನ ಒಡೆತನದಲ್ಲಿರುವ ಬ್ರಿಕ್‌ವರ್ಕ್ಸ್ ಅನಾಲಿಟಿಕ್ಸ್ ಎಂಎಸ್‌ಎಂಇ1 ಸೇವೆಯನ್ನು ಆರಂಭಿಸಿದೆ. ಇದು ಡಿಜಿಟಲ್ ವೇದಿಕೆಯಾಗಿದ್ದು ಅತಿಸಣ್ಣ, ಸಣ್ಣಮತ್ತುಮಧ್ಯಮ ಪ್ರಮಾಣದ ಉದ್ಯಮಗಳಿಗೆ ಎಲ್ಲ ರೀತಿಯ ಡಿಜಿಟಲ್ ಸೇವೆಯನ್ನು ಒದಗಿಸಲಿದೆ.

ಎಂಎಸ್‌ಎಂಇ ಪರ್ಫಾರ್ಮೆನ್ಸ್ ಗ್ರೇಡಿಂಗ್, ಡ್ಯೂ ಡಿಲಿಜೆನ್ಸ್, ಬಿಡಬ್ಲ್ಯುಎ ಪ್ರಮಾಣಿತ ಸರ್ಟಿಫಿಕೇಷನ್ ಮತ್ತು ಕಂಪೆನಿ ಪ್ರೊಫೈಲಿಂಗ್ ಇದರಲ್ಲಿ ಸೇರಿದೆ. ತಾಂತ್ರಿಕವಾಗಿ ಮುಂದುವರೆದಿರುವ ಈ ಡಿಜಿಟಲ್ ವೇದಿಕೆ, ಎಲ್ಲ ಸಮಯದಲ್ಲಿಯೂ ವೆಬ್ ಮೂಲಕ ಸೇವೆಗೆ ಲಭ್ಯವಿದ್ದು, ಬಳಕೆದಾರರಿಗೆ ಅನುಕೂಲಕರವಾದ ಮತ್ತು ಕೊಡುಗೆ ಖರೀದಿಯಿಂದ ದಾಖಲೆಗಳನ್ನು ಅಪ್‌ಲೋಡ್ ಮಾಡುವುದರಿಂದ ಪರಿಪೂರ್ಣ ವರದಿ ಪಡೆಯುವವರೆಗೂ ಕಾಗದರಹಿತ ಅನುಭವವನ್ನು ಒದಗಿಸುತ್ತದೆ ಎಂದು ಕಂಪೆನಿ ಹೇಳಿದೆ.

ಬ್ರಿಕ್‌ವರ್ಕ್ ಅನಾಲಿಟಿಕ್ಸ್ ಗ್ರೇಡಿಂಗನ್ನು ಸ್ವತಂತ್ರವಾಗಿ ಪ್ರಮಾಣಿಸಿ, ಮೌಲ್ಯಮಾಪನಗೊಳಿಸಿ, ಉದ್ಯಮಗಳ ಕಾರ್ಯಕ್ಷಮತೆ, ಆರ್ಥಿಕ ಮತ್ತು ನಿರ್ವಹಣೆ ಸಾಮರ್ಥ್ಯವನ್ನು ವಿಶ್ಲೇಷಿಸಲಾಗುತ್ತದೆ. ಕಂಪೆನಿಯ ಒಟ್ಟಾರೆ ಕ್ರೆಡಿಟ್ ಸಾಮರ್ಥ್ಯವನ್ನು ಇದರ ಮೂಲಕ ಅಳೆಯಲಾಗುವುದು

ಬ್ರಿಕ್‌ವರ್ಕ್ಸ್ ಅನಾಲಿಟಿಕ್ಸ್‌ನ ರಿಸ್ಕ್ ಮತ್ತು ಅನಾಲಿಟಿಕ್ಸ್‌ನ ಮುಖ್ಯಸ್ಥರಾದ ರೀಟಾಬನ್ ಬಸು ಮಾತನಾಡಿ ಬಿಡಬ್ಲ್ಯುಎ ಗ್ರೇಡಿಂಗ್‌ನಿಂದಾಗಿ ಕಂಪೆನಿಗಳು ತಮ್ಮ ವಿಶ್ವಾಸಾರ್ಹತೆಯನ್ನೂ ಹೆಚ್ಚಿಸಿಕೊಳ್ಳಬಹುದು. ತಮ್ಮ ಗ್ರಾಹಕರು, ಪೂರೈಕೆದಾರರು ಹಾಗೂ ಹಣಕಾಸು ನೆರವು ನೀಡುವವರಲ್ಲಿ ಆತ್ಮವಿಶ್ವಾಸವನ್ನು ತುಂಬಿಸಬಹುದು. ಗ್ರೇಡಿಂಗ್ ವರದಿಯಿಂದ ಈ ಸಮುದಾಯ ಉದ್ಯಮದ ಅಭಿವೃದ್ಧಿಯ ಸಾಧ್ಯತೆಗಳನ್ನು ಸಮಗ್ರವಾಗಿ ಅರ್ಥೈಸಿಕೊಂಡು ಅದಕ್ಕೆ ತಕ್ಕ ನಿರ್ಧಾರ ತೆಗೆದುಕೊಳ್ಳಬಹುದು ಎಂದು ಹೇಳಿದರು.

